ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.  3869/2022

ಸಿ.ಡಬ್ಲ್ಯೂ-03
ಪಿ.ಡಬ್ಲ್ಯೂ-02

**ಸಾಕ್ಷಿಗೆ ದಿಃ 26.03.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿಪರಃ ಶ್ರೀ C.G. ವಕೀರರಿಂದಃ**

ನಮ್ಮ ಮನೆ ಬಲಭಾಗಕ್ಕೆ ಕೃಷ್ಣಪ್ಪ ಅವರು ಮನೆ ಇರುತ್ತದೆ. ಅವರ ಸ್ವತ್ತಿನಲ್ಲಿ ಅವರು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಮನೆ ಕಟ್ಟಿದ ನಂತರ ಹಾಲಿಯ ನನ್ನ ಮತ್ತು ಅವರ ಮನೆಯ ನಡುವೆ 8 ಅಡಿ ಅಂತರ ಇರುತ್ತದೆ. ಆರೋಪಿತರು ಅವರ ಜಾಗದಲ್ಲಿ ನಿಯಮಾನುಸಾರ ಜಾಗ ಬಿಟ್ಟು ಮನೆ ಕಟ್ಟಿದ್ದಾರೆ ಎಂದರೆ ಸಾಕ್ಷಿ ಒತ್ತುವರಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಒತ್ತುವರಿ ಆಗಿರುವ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ನೀಡಿರುತ್ತೇನೆ. ಕೃಷ್ಣಪ್ಪ ಅವರು ಯಾವುದೇ ಒತ್ತುವರಿ ಮಾಡಿ ಮನೆ ಕಟ್ಟಿದ್ದ ನಾನು ಪೋಲಿಸರಿಗೆ ಯಾವುದೇ ದಾಖಲೆ ನೀಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೃಷ್ಣಪ್ಪ ಮತ್ತು ಆರೋಪಿತರು ಈ ಪ್ರಕರಣದಲ್ಲಿ ದೂರು ನೀಡುವ ಮೊದಲೇ ದೂರನ್ನು ನೀಡಿದ್ದು ನಾನು ಸದರಿ ಪ್ರಕರಣದಲ್ಲಿ ಹಾಜರಾಗುತ್ತಿದ್ದೇನೆ ಎಂದರೆ ಸರಿ. ನನ್ನ ಮಗ ನಾನು ಮತ್ತು ನನ್ನ ಹೆಂಡತಿ ಆರೋಪಿತರ ಮೇಲೆ ಹಲ್ಲೆ ಮಾಡಿದ ಬಗ್ಗೆ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ದೂರನ್ನು ನೀಡಿರುತ್ತಾರೆಂದು ಹೇಳುತ್ತಾರೆ. ಆರೋಪಿತರೂ ನಾನು ಹೇಳಿದಂತೆ ಯಾವುದೇ ಸುಳ್ಳು ದೂರನ್ನು ನೀಡಿಲ್ಲ ಹಲ್ಲೆ ಮಾಡಿದ ಬಗ್ಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿ.

ನಾನು ರಾಜಕೀಯ ಪ್ರಭಾವ ಬಳಸಿ ಆರೋಪಿತರ ವಿರುದ್ದ ನಾನು ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕಲ್ಲಿನಿಂದ ನನಗೆ ಹೊಡೆದಿರುವುದಿಲ್ಲ ನನ್ನ ಹೆಂಡತಿಗೆ ರೂಪ ಮತ್ತು ಚಂದ್ರಮ್ಮಾ ಅವರು ಬಲಭುಜಕ್ಕೆ ಹೊಡೆದಿರುತ್ತಾರೆ. ರಕ್ತ ಹೆಪ್ಪುಗಟ್ಟಿರುತ್ತದೆ. ಆರೋಪಿ 1 ದೊಣ್ಣೆಯಿಂದ ಚಾಸಾ 2 ಅವರಿಗೆ ಹೊಡೆದಿರುತ್ತಾರೆ. ರಕ್ತ ಗಾಯ ಆಗಿರುತ್ತದೆ. ಬಟ್ಟೆ ರಕ್ತ ಕಲೆ ಆಗಿರುವುದಿಲ್ಲ. ಆ ಸಮಯದಲ್ಲಿ ನನ್ನ ಮಗ ಹೆಂಡತಿ ಮತ್ತು ಸೊಸೆ ಎಲ್ಲರೂ ಇದ್ದರು.

ನಾವೆಲ್ಲರೂ ಸೇರಿ ಅವರ ಮೇಲೆ ಗಲಾಟೆ ಮಾಡಿದ್ದು ಆರೋಪಿತರು ನಮ್ಮ ಮೇಲೆ ಯಾವುದೇ ರೀತಿಯ ಗಲಾಟೆ ಮಾಡಿಲ್ಲವೆಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 5 ಮತ್ತು 6 ಅವರು ಬಂದು ಜಗಳ ಬಿಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆ ದಿಃ 16.04.2020 ರಂದು ಪಡೆದಿರುತ್ತಾರೆ. ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮು. ಮಾ. ಕಡ್ಡಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದೊಣ್ಣೆ ನಿಲಗಿರಿ ಜಾತಿಯದ್ದಾಗಿರುತ್ತದೆ. ಅಂತಹ ದೊಣ್ಣೆ ಎಲ್ಲಕಡೆ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾನು ಅದನ್ನು ಸೃಷ್ಟಿ ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಆರೋಪಿತರು ಮು. ಮಾ. ಗಳಿಂದ ಹಲ್ಲೆ ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ನೀಡಿದ ದಿನ ಮು. ಮಾ. ಗಳನ್ನು ಜಪ್ತು ಮಾಡಿಕೊಂಡಿರುತ್ತಾರೆ. ಪಂಚನಾಮೆಗೆ ನಾನು ಸಹಿ ಮಾಡಿರುವುದಿಲ್ಲ. ಪೋಲಿಸರು ಮು. ಮಾ. ಗಳನ್ನು ಜಪ್ತು ಮಾಡಿಕೊಂಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 5 ಮತ್ತು 6 ನನ್ನ ಸ್ನೆಹೀತರು ಆಗಿರುತ್ತಾರೆ ಎಂದರೆ ಸರಿಯಲ್ಲ. ಅವರು ನನ್ನ ಸ್ನೇಹಿತರು ಆಗಿರುವ ಕಾರಣ ಬಂದು ಜಗಳ ಬಿಡಿಸಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮು. ಮಾ. ಗೂ ಯಾವುದೇ ಸಂಬಂಧ ಇಲ್ಲ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.